<u>ದಿನಾಂಕಃ 30-07-2025 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>ಪಾಟೀ ಸವಾಲುಃ</u> 1 ನೇ ಪ್ರತಿವಾದಿ ಪರ ಶ್ರೀ. ಟಿ. ಕೆ. ಆರ್. ಜಿ. ವಕೀಲರಿಂದ

ನನ್ನ ತಂದೆ 1999 ನೇ ಇಸವಿಯಲ್ಲಿ ಮೃತ ಹೊಂದಿರುತ್ತಾರೆ. ನನ್ನ ತಾಯಿ 2014 ನೇ ಇಸವಿಯಲ್ಲಿ ಮೃತ ಹೊಂದಿರುತ್ತಾರೆ. ನಾನು ನನ್ನ 26 ನೇ ವಯಸ್ಸಿನಲ್ಲಿ ನನ್ನ ಸ್ವಂತ ಊರಾದ ಅರೆಅಲ್ಲಹಳ್ಳಿ ಗ್ರಾಮವನ್ನು ಬಿಟ್ಟು ಬೆಂಗಳೂರಿನಲ್ಲಿ ನೆಲೆಸಿರುತ್ತೇನೆ. ನನ್ನ ಅಣ್ಣ ಚಿಕ್ಕಯ್ಯ 2010 ನೇ ಇಸವಿಯಲ್ಲಿ ಮೃತ ಹೊಂದಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ಅರೆಅಲ್ಲಹಳ್ಳಿ ಗ್ರಾಮದಲ್ಲಿ ವಾಸಮಾಡಿಕೊಂಡಿರುತ್ತಾರೆ. ನಾನು ಬೆಂಗಳೂರಿನಲ್ಲಿ ಹಲವಾರು ತರಹದ ಕೆಲಸವನ್ನು ಮಾಡಿ ಈಗ ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ಚಿಕ್ಕಯ್ಯ ನನ್ನ ಅಣ್ಣ ಇದ್ದು ಅವರು ಮತ್ತು 1 ನೇ ಪ್ರತಿವಾದಿ ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ನಾಗಮಂಗಲದ ಕುರಿ ಮತ್ತು ಉಣ್ಣೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಮರಗೆಲಸ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಜೀವನಕ್ಕೆ ತುಂಬಾ ಕಷ್ಟ ಇತ್ತು ಎಂದರೆ ಸರಿಯಲ್ಲ.

2. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾಗ ಹಬ್ಬಕ್ಕೆ ಊರಿಗೆ ಬಂದಾಗ ನನಗೆ ಅವಶ್ಯಕತೆ ಇದ್ದ ಅಕ್ಕಿ, ರಾಗಿ ಬೇಳೆಯನ್ನು ನನ್ನ ಒಟ್ಟು ಕುಟುಂಬದಿಂದ ತೆಗೆದುಕೊಂಡು ಹೋಗುತ್ತಿದ್ದೆನು ಎಂದರೆ ಸರಿ. ಬೆಂಗಳೂರಿನಲ್ಲಿ ನನ್ನ ಜೀವನಕ್ಕೆ ನಾನು ಕಷ್ಟ ಪಡುತ್ತಿದ್ದೆನು ಎಂದರೆ ಸಾಕ್ಷಿ ಸ್ವಲ್ಪ ಸಮಯ ಕಷ್ಟ ಇತ್ತು ಆನಂತರ ಯಾವುದೇ ಕಷ್ಟ ಇರಲಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಆಸ್ತಿಯಲ್ಲಿ ಬಂದ ಉತ್ಪತ್ತಿಯನ್ನು ನಾನು ತೆಗೆದುಕೊಂಡು ಹೋಗಿ ಚಂದ್ರು ಲೇಔಟ್ ನಲ್ಲಿ 30X40 ಅಡಿ ವಿಸ್ತೀರ್ಣದ ನಿವೇಶನ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಮನೆಯನ್ನು ಹೊಂದಿರುತ್ತೇನೆ. ಸದರಿ ಮನೆಯನ್ನು ನಾನು ಈ

ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನನ್ನ ಸ್ವಂತ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ನಿವೇಶನ ಖರೀದಿಸಿ ಮನೆಯನ್ನು ಕಟ್ಟುವ ಆರ್ಥಿಕ ಸ್ಥಿತಿ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ಮನೆ ಕಟ್ಟಲು ಒಂದು ಮತ್ತು 2 ನೇ ಪ್ರತಿವಾದಿಗಳು ಇಟ್ಟಿಗೆ ಹಾಗೂ ಮರವನ್ನು ಸರಬರಾಜು ಮಾಡಿದ್ದು ಮನೆಯನ್ನು ಕಟ್ಟಲು ಅವರ ಸಹ ಶ್ರಮಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಮರಳನ್ನು ಸಹ ಅವರೇ ಸಾಗಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಬೆಂಗಳೂರಿನಲ್ಲಿರುವ ಮನೆ ನನ್ನ ಸ್ವಂತ ಮನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಂದೆಯ ಮರಗೆಲಸದಿಂದ ಒಳ್ಳೆಯ ಆದಾಯ ಇತ್ತು ಎಂದರೆ ಸರಿ. ಅವರ ಆದಾಯದಿಂದ ಅವರು ಕೆಲವು ಆಸ್ತಿಗಳನ್ನು ಖರೀದಿ ಮಾಡಿದದರು ಎಂದರೆ ಸರಿಯಲ್ಲ. ನನ್ನ ತಂದೆ ಸರ್ವೆ ನಂಬರ್ 143/4 ರಲ್ಲಿ 14 ಗುಂಟೆ ಜಮೀನನ್ನು ದಿನಾಂಕಃ 31-08-1991 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಹಣದಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಅದರಲ್ಲಿ ದಿನಾಂಕಃ 02-02-1983 ರಂದು ನನ್ನ ತಂದೆ ಸರ್ವೆ ನಂಬರ್ 7/3 ರಲ್ಲಿ 20 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದನ್ನೂ ಸಹ ಒಟ್ಟು ಕುಟುಂಬದ ಹಣದಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಆದರಂತೆ ದಿನಾಂಕಃ 18-11-1975 ರಂದು ಸರ್ವೆ ನಂಬರ್ 144/1 ಎ ರಲ್ಲಿ 24 ಗುಂಟೆ, 7/3 ರಲ್ಲಿ 19 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದನ್ನೂ ಸಹ ಒಟ್ಟು ಕುಟುಂಬದ ಹಣದಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅದರಂತೆ ದಿನಾಂಕಃ 14-12-1990 ರಂದು ಸರ್ವೆ ನಂಬರ್ 143/4 ರಲ್ಲಿ 28 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದನ್ನೂ ಸಹ ಒಟ್ಟು ಕುಟುಂಬದ ಹಣದಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅದರಂತೆ ದಿನಾಂಕಃ 16-02-1994 ರಂದು ಸರ್ವೆ ನಂಬರ್ 42/1 ರಲ್ಲಿ 5 ಗುಂಟೆ, 42/3 ಎ ರಲ್ಲಿ 21 ಗುಂಟೆ, 45/3 ರಲ್ಲಿ 21 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದನ್ನೂ ಸಹ ಒಟ್ಟು ಕುಟುಂಬದ ಹಣದಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಆಗಿದ್ದು ಅವುಗಳ ಮೇಲೆ

ನಮಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳ ಖಾತೆ ನನ್ನ ತಂದೆಯ ಹೆಸರಿಗೆ ದಾಖಲಾಗಿತ್ತು ಎಂದರೆ ಸರಿ. ಸದರಿ ಆಸ್ತಿಗಳಿಗೆ ನನ್ನ ತಂದೆಯೇ ಹಕ್ಕುದಾರರಾಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮೃತ ಹೊಂದುವ ಸಮಯದಲ್ಲಿ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ಎಂದೂ ಸಹ ನಾನು ನನ್ನ ತಂದೆಯ ಯೋಗಕ್ಷೇಮವನ್ನು ನೋಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಆರೋಗ್ಯ ಸರಿ ಇಲ್ಲದೆ ಇದ್ದಾಗ ನಾನು ಅವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದೆನು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ನನ್ನ ತಂದೆ ಮೃತ ಹೊಂದುವವರೆಗೂ ಅವರ ಯೋಗಕ್ಷೇಮವನ್ನು ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನನ್ನ ತಂದೆ ತಮ್ಮ ಸ್ವಯಾರ್ಜಿತ ಆಸ್ತಿಗಳನ್ನು ದಿನಾಂಕ 17-06-1996 ರ ವಿಲುನಾಮೆಯ ಮೂಲಕ 1 ನೇ ಪ್ರತಿವಾದಿಗೆ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮೃತ ಹೊಂದಿದ ನಂತರ ಸದರಿ ವಿಲುನಾಮೆಯ ಆಧಾರದ ಮೇಲೆ 1 ನೇ ಪ್ರತಿವಾದಿ ಸದರಿ ಆಸ್ತಿಗಳ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ವಿಲುನಾಮೆಯಲ್ಲಿ 1 ನೇ ಪ್ರತಿವಾದಿಗೆ ನೀಡಿರುವ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ 20 ನೇ ಆಸ್ತಿಯಲ್ಲಿ ಮೊದಲು ಹಳೆಯ ಮನೆಯಿದ್ದು 1 ನೇ ಪ್ರತಿವಾದಿ 10 ಲಕ್ಷ ರೂಪಾಯಿ ಸಾಲ ಮಾಡಿ ಸ್ವಂತವಾಗಿ ಸದರಿ ಮನೆಯನ್ನು ರಿಪೇರಿ ಮಾಡಿ ನವೀಕರಿಸಿರುತ್ತಾರೆ ಎಂದರೆ ಸರಿಯಲ್ಲ.

4. ನನ್ನ ಮತ್ತೊಬ್ಬ ಅಣ್ಣ ಚಿಕ್ಕಯ್ಯ ರವರು ಶಿಕಾರಿಪುರರದಲ್ಲಿ ವಾಸಮಾಡಿಕೊಂಡಿದ್ದರು. ಶಿಕಾರಿಪುರದಲ್ಲಿ ಸದರಿ ಚಿಕ್ಕಯ್ಯನವರ ಹೆಸರಿಗೆ ಸರ್ವೆ ನಂಬರ್ 70/1 ರಲ್ಲಿ 18 1/2 ಗುಂಟೆ, ಸರ್ವೆ ನಂಬರ್ 242/ಬಿ 1 ಎಕರೆ 36 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಗಳು ಸಹ ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯೂ ಮನೆಯನ್ನು ನವೀಕರಿಸುವ ಸಮಯದಲ್ಲಿ ಅದಕ್ಕೆ ಒಪ್ಪಿಗೆ ನೀಡಿ ನಾವು ಅದರಲ್ಲಿ ಹಿಸ್ಸೆ ಕೇಳುವುದಿಲ್ಲ ಎಂದು ಅವರಿಗೆ ಭರವಸೆ ನೀಡಿದ್ದೆವು ಎಂದರೆ ಸರಿಯಲ್ಲ. ಆ ನಂಬಿಕೆಯ ಆಧಾರದ ಮೇಲೆ 1 ನೇ ಪ್ರತಿವಾದಿ ಮನೆ ನವೀಕರಿಸಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ಕುಟುಂಬದ ಎಲ್ಲಾ ಮಕ್ಕಳ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 7 ರಿಂದ 9ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರು ಗೈರ ಹಾಜರು ಕಾರಣ ಪಾಟಿ ಸವಾಲು ಮುಂದೂಡಲಾಯಿತು

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ.

ಸಾಕ್ಷಿದಾರರ ಸಹಿಃ